ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಜುಲೈ – ಸೆಪ್ಟೆಂಬರ್ 2023 ಸಂಚಿಕೆ: 1

## ಕೆ.ವಿ.ಕೆ., ಕೊನೇಹಳ್ಳಿ ವತಿಯಿಂದ ಬಾಳೆ ಬೆಳೆಯ ಸಮಗ್ರ ಬೆಳೆ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ

ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಬಾಳೆ ಬೆಳೆಯ ಸಮಗ್ರ ಬೆಳೆ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು. ಕೃಷಿ ವಿಸ್ತರಣಾ ವಿಜ್ಞಾನಿಗಳಾದ ಶ್ರೀ. ದರ್ಶನ್ ಎಂ.ಇ.,ರವರು ಮಾತನಾಡಿ ಮುಂಚೂಣಿ ಪ್ರಾತ್ಯಕ್ಷಿಕೆಯ ಮಹತ್ವವನ್ನು ತಿಳಿಸಿದರು. ಮುಂಚೂಣಿ ಪ್ರಾತ್ಯಕ್ಷಿಕೆಯು ನೋಡಿ ತಿಳಿ, ಮಾಡಿ ಕಲಿ ತತ್ವವನ್ನು ಆಧರಿಸಿದ್ದು, ತಂತ್ರಜ್ಞಾನದ ಮೌಲ್ಯವನ್ನು ಬೋಧಿಸಲು ಹಾಗೂ ರೈತರಿಗೆ ಮನದಟ್ಟಾಗುವಂತೆ ಮಾಡಲು ಉಪಯೋಗಿಸುವ ಪ್ರಬಲ ವಿಸ್ತರಣಾ ಭೋಧನ ವಿದಾನ. ಈ ಪ್ರಾತ್ಯಕ್ಷಿಕೆಯು ವಿಜ್ಞಾನಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾಗುವ ಒಂದು ಫಲಿತಾಂಶ ಪ್ರಾತ್ಯಕ್ಷಿಕೆಯಾಗಿದ್ದು, ನೂತನ ತಂತ್ರಜ್ಞಾನಗಳನ್ನು ಜಿಲ್ಲೆಯ ಅಭಿವೃದ್ಧಿ ಇಲಾಖೆಗಳ ಪ್ರಮುಖ ವಿಸ್ತರಣಾ ವ್ಯವಸ್ಥೆ ಪೂರೈಸುವ ಮೊದಲು ಮುಂಚೂಣಿ ಪ್ರಾತ್ಯಕ್ಷಿಕೆಗಳಲ್ಲಿ ಆ ತಂತ್ರಜ್ಞಾನಗಳ ಮೌಲ್ಯ ಮತ್ತು ಸ್ಥಳೀಯ ಅನ್ವಯಿಕತೆ ಪ್ರದರ್ಶಿಸಿಸಲು ಒಂದು ನಿರ್ದಿಷ್ಟ ಪರಿಸರದಲ್ಲಿ ನಡೆಸಲಾಗುವುದು. ಈ ಪ್ರಾತ್ಯಕ್ಷಿಕೆಗಳನ್ನು ತಮ್ಮದೇ ಪರಿಸರದಲ್ಲಿ ನಡೆಸುವುದರಿಂದ ವಿಸ್ತರಣಾ ಕಾರ್ಯಕರ್ತರಿಗೆ ಹಾಗೂ ರೈತರಿಗೆ ತಂತ್ರಜ್ಞಾನಗಳ ಕಾರ್ಯಕ್ಷಮತೆಯನ್ನು ನೇರವಾಗಿ ನೋಡುವ ಹಾಗೂ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಮನದಟ್ಟು ಮಾಡಿಕೊಳ್ಳುವ ಅವಕಾಶವಿರುತ್ತದೆ ಎಂದು ಕರೆ ಕೊಟ್ಟರು.

ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ., ರವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ರೈತರು ಬಾಳೆ ಬೆಳೆಗಳನ್ನು ವಾಣಿಜ್ಯವಾಗಿ ಬೆಳೆಯುತ್ತಿದ್ದಾರೆ. 75 ಗ್ರಾಂ ಬಾಳೆ ಸ್ಪೆಷಲ್ ಮಿಶ್ರಣವನ್ನು ಒಂದು ಶ್ಯಾಂಪು ಸ್ಯಾಚೆಟ್ ಮತ್ತು ಒಂದು ನಿಂಬೆ ಹಣ್ಣಿನ ರಸವನ್ನು 15 ಲೀಟರ್ ನೀರಿನೊಂದಿಗೆ ಮಿಶ್ರಣ ಮಾಡಿ ಬಾಳೆ ಬೆಳೆ ನಾಡಿ ಮಾಡಿದ 5ನೇ ತಿಂಗಳಿಂದ ಸಿಂಪಡಣೆಯನ್ನು ಪ್ರಾರಂಭಿಸಿ 10ನೇ ತಿಂಗಳನವರೆಗೂ ಸಿಂಪಡಿಸಬೇಕು. ಹೀಗೆ ಸಿಂಪಡಿಸುವುದರಿಂದ ಗೊನೆಯ ತೂಕ ಸುಮಾರು 20–25% ರಷ್ಟು ಹೆಚ್ಚಾಗುತ್ತದೆ ಎಂದು ರೈತರಿಗೆ ಮಾಹಿತಿಯನ್ನು ನೀಡಿದರು.

ಇದರ ಜೊತೆಗೆ ಬಾಳೆ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ, ರಸವಾರಿ ಕಂದುಗಳ ನಿರ್ವಹಣೆ, ಅಂಗಾಂಶ ಬಾಳೆ ಬಗ್ಗೆ ಮಾಹಿತಿಯನ್ನು ನೀಡಿದರು.ಈ ಸಂದರ್ಭದಲ್ಲಿ ನೆರೆದಿದ್ದ ರೈತರಿಗೆ ಬಾಳೆ ಸ್ಪೆಷಲ್ ಸಿಂಪಡಣೆಯ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಗೃಹ ವಿಜ್ಞಾನಿಗಳಾದ ಡಾ. ನಿತ್ಯಶ್ರೀ ಕೆ., ಕೃಷಿ ಹವಮಾನ ಶಾಸ್ತ್ರದ ವಿಷಯ ತಜ್ಞರಾದ ಡಾ. ಪದ್ಮನಾಭನ್ ಮತ್ತು ಗ್ರಾಮದ ರೈತರಯ ಉಪಸ್ಥಿತರಿದ್ದರು.



## ಭತ್ತದ ಬೆಳೆಯಲ್ಲಿ ಅಧಿಕ ಇಳುವರಿಗಾಗಿ ಆರ್.ಎನ್.ಆರ್ 15048 ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆ



ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಭತ್ತದ ಬೆಳೆಯಲ್ಲಿ ಅಧಿಕ ಇಳುವರಿಗಾಗಿ ಆರ್.ಎನ್.ಆರ್ 15048 ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು. ಭತ್ತ ನಮ್ಮ ರಾಜ್ಯದ ಪ್ರಮುಖ ಆಹಾರ ಮತ್ತು ವಾಣಿಜ್ಯ ಬೆಳೆಯಾಗಿದ್ದು 10.93 ಲಕ್ಷ ಹೆ. ವಿಸ್ತೀರ್ಣ, 50.09 ಲಕ್ಷ ಟನ್ ಉತ್ಪದನೆ, 4,674 ಕೆ.ಜಿ/ಹೆ. ಸರಾಸರಿ ಇಳುವರಿ.

ಇತ್ತರೆ ಬೆಳೆಗಳಿಗೆ ಹೊಲಿಸಿದರೆ ಕೂಲಿ ಆಳುಗಳ ಅವಶ್ಯಕತೆ ಅಧಿಕ ಶೇ. 11 ರಷ್ಟು ಆಳುಗಳು ಭೂಮಿ ಕೆಸರು ಮಾಡಲು, ಶೇ. 38 ರಷ್ಟು ನಾಟಿ ಮಾಡಲು, ಶೇ. 19 ರಷ್ಟು ಕಳೆತೆಗೆಯಲು, ಶೇ. 20 ರಷ್ಟು ಕಟಾವು ಮಾಡಲು ಬೇಕಾಗಿರುತ್ತದೆ. ನಗರೀಕರಣ ಮತ್ತು ಕೃಷಿ ಕ್ಷೇತ್ರದ ಅನಿಶ್ಚಿತತೆಯಿಂದ ಕೃಷಿ ಕಾರ್ಮಿಕರ ಅಭಾವ ಕಂಡು ಬರುತ್ತಿದೆ ಜೊತೆಗೆ ಲಭ್ಯವಿರುವ ಆಳುಗಳ ದಿನಗೊಲಿಯು ಗಣನೀಯವಾಗಿ ಏರುತ್ತಿದೆ ಈ ಬೆಳವಣಿಗೆಗಳ ಹಿನ್ನಲೆಯಲ್ಲಿ ಭತ್ತದ ಕೃಷಿ ಕಷ್ಟಕರವಾಗಿದೆ ಈ ಸಮಸ್ಯೆಗಳಿಗೆಲ್ಲಾ ಏಕೈಕ ಪರಿಹಾರವೇಂದರೆ ಭತ್ತ ಬೇಸಾಯವನ್ನು ಯಾಂತ್ರೀಕರಣಗೊಳಿಸಿ ಬೇಸಾಯ ವೆಚ್ಚವನ್ನು ನಿಯಂತ್ರಿಸಿ ಇಳುವರಿಯಲ್ಲಿ ಹೆಚ್ಚಳ ಮಾಡುವುದು ಭೂಮಿಯನ್ನು ಹದಗೊಳಿಸುವುದರಿಂದ ಕೊಯ್ಲಿನವರೆಗೂ ಸಂಪೂರ್ಣ ಯಾಂತ್ರೀಕರಣ ಭತ್ತದ ಕೃಷಿಗೆ ವರದಾನವಾಗಿದೆ ಇದಕ್ಕೆ ಪೂರಕವಾದ ಹಲವು ಕೃಷಿ ಪದ್ಧತಿಗಳಾದ ಟ್ರೇ ಪದ್ಧತಿಯಲ್ಲಿ ಸಸಿ ಬೆಳಸುವುದು, ಅರೆ ನೀರಾವರಿ ಪದ್ಧತಿ, ಭತ್ತದ ಕಾಳನ್ನು ನೇರ ಬಿತ್ತನೆ ಮಾಡುವುದು ಹೀಗೆ ಹಲವಾರು ತಂತ್ರಜ್ಞಾನಗಳನ್ನು ಅಳವಡಿಸುವುದರ ಮುಖಾಂತರ ರೈತರು ಭತ್ತದ ಬೇಸಾಯವನ್ನು ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ತಿಪಟೂರು ತಾ. ತುಮಕೂರು ಜಿಲ್ಲೆ. ಕೃಷಿ ವಿಜ್ಞಾನಿಗಳಾದ ಡಾ. ಎಂ. ಪದ್ಮನಾಭನ್ ರವರು ನೂತನ ಭತ್ತದ ತಳಿಯಾದ ಆರ್.ಎನ್.ಆರ್–15048 ತಳಿಯನ್ನು ಕುಣಿಗಲ್ ತಾ. ಕೆ.ಆರ್.ಎಸ್ ಅಗ್ರಹಾರ ಮತ್ತು ಬುದನಳ್ಳಿ ಗ್ರಾಮಗಳಿಗೆ ಮುಂಚೂಣಿ ಪ್ರಾತ್ಯಕ್ಷಿಕೆಯಾಗಿ ಈ ತಳಿಯನ್ನು ರೈತರಿಗೆ ಬಿತ್ತನೆ ಮಾಡಲು ಬಿತ್ತನೆ ಬೀಜ ಮತ್ತು ಪೂರಕವಾದ ಮಾಹಿತಿಯನ್ನು ನೀಡಿರುತ್ತಾರೆ. ಈ ತಳಿಯ ವಿಶೇಷವೆಂದರೆ ಇಳುವರಿ 25–30 ಕ್ವಿ. ಪ್ರತಿ ಎಕರೆಗೆ, ಹುಲ್ಲಿನ ಇಳುವರಿ 2–3 ಟನ್, ಕಾಲಾವಧಿ 120–125 (ದಿನಗಳು– ಬಿತ್ತನೆಯಿಂದ ಕಟಾವಿನವರೆಗೆ) ಮತ್ತು ಉತ್ತಮ ಅಕ್ಕಿ ಪಡೆಯಬಹುದಾಗಿದೆ.

## ಕೆ.ವಿ.ಕೆ., ಕೊನೇಹಳ್ಳಿ ವತಿಯಿಂದ ಬಾಳೆ ಬೆಳೆಯ ಸಮಗ್ರ ಬೆಳೆ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ



ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ವತಿಯಿಂದ ಕುಣಿಗಲ್ ತಾಲ್ಲೂಕಿನ ಇಪ್ಪಾಡಿ ಗ್ರಾಮದಲ್ಲಿ ಶುಂಠಿಯಲ್ಲಿ ಕೋಳೆ ರೋಗ ಪದ್ಧತಿಯ ಮುಂಚೂಣಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಯಿತು.

ಕೆ.ವಿ.ಕೆ. ಸಸ್ಯ ಸಂರಕ್ಷಣೆ ವಿಜ್ಞಾನಿಯಾದ ಡಾ. ಮನೋಜ್ ಹೆಚ್. ರವರು ಮಾತನಾಡಿ ಜಿಲ್ಲೆಯಲ್ಲಿ ಶುಂಠಿಯನ್ನು ರೈತರು ಬೆಳೆಯಲಾಗಿದ್ದು. ಶುಂಠಿ ಬೆಳೆಯಲ್ಲಿ ಕೋಳೆ ರೋಗ ಮುಖ್ಯವಾದ ರೋಗ, ಕೋಳೆ ರೋಗ ನಿರ್ವಹಾಣೆ ಕ್ರಮಗಳನ್ನು ರೈತರಿಗೆ ಮನವರಿಕೆ ಮಾಡಿಕೋಡಲಾಗಿತ್ತು ಹಾಗೂ ಶುಂಠಿ ಸ್ಪೆಶಲ್ ಬಳಕೆ ಮಾಡುವುದರಿಂದ ಶುಂಠಿಯಲ್ಲಿ ಹೆಚ್ಚು ಇಳುವರಿಯನ್ನು ಪಡೆಯಬಹುದು.

ಕೆ.ವಿ.ಕೆ. ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ.,ರವರುಶುಂಠಿ ಬೆಳೆಯ ಬೇಸಾಯ ಕ್ರಮಗಳನ್ನು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ನೆರೆದಿದ್ದ ರೈತರಿಗೆ ಜೈವಿಕ ರೋಗ ನಾಶಕಗಳನ್ನು ವಿತರಿಸಲಾಯಿತು. ಕೆ.ವಿ.ಕೆ. ವಿಸ್ತರಣಾ ವಿಜ್ಞಾನಿಯಾದ ಡಾ. ದರ್ಶನ್ ಮತ್ತು ಪ್ರಗತಿಪರ ರೈತರದ ಪರಮಶಿವಯ್ಯ ಹಾಗೂ ರೈತರು ಭಾಗವಹಿಸಿದ್ದರು.

# ಹಲಸಿನಲ್ಲಿ ಉತ್ಪಾದನಾ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಪ್ರಾತ್ಯಕ್ಷಿಕೆ



ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ಹಾಗೂ ಹಳ್ಳಿ ಸಿರಿ ಸಂಘ ತೋವಿನಕೆರೆ, ಕೊರಟಗೆರೆ ತಾ., ಇವರ ಸಂಯುಕ್ತ ಆಶ್ರಯದಲ್ಲಿ ತಡಸೂರಿನಲ್ಲಿ ಬುಧವಾರ ಹಲಸಿನ ಉತ್ಪಾದನಾ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಹಲಸಿನಹಣ್ಣನ್ನು ಕಟಾವು ಮಾಡುವ ಮುಖಾಂತರ ಉದ್ಘಾಟಿಸಲಾಯಿತು.

ರೈತರು ಹಲಸು ಬೆಳೆಯನ್ನು ಉಪ ಬೆಳೆಯಾಗಿ ಪರಿಗಣಿಸಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಹೊಸ-ಹೊಸ ವಿವಿಧ ಬಗೆಯ ಹಲಸು ಬೆಳೆಯನ್ನು ಬೆಳೆಯುವವರ ಜೊತೆಗೆ ಮೌಲ್ಯವರ್ಧಿತ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಆರ್ಥಿಕ ಅಭಿವೃದ್ಧಿ ಹೊಂದಬಹುದೆಂದು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಆದಾ ಡಾ. ವಿ. ಗೋವಿಂದ ಗೌಡ ತಿಳಿಸಿಕೊಟ್ಟರು.

ಹಲಸಿನಹಣ್ಣಿನ ಸೀಸನ್ ಈಗಾಗಲೇ ಬಂದಾಗಿದೆ, ನಾಲಿಗೆಗೆ ರುಚಿ ನೀಡುವ ಈ ಹಲಸಿನ ಹಣ್ಣಿನಲ್ಲಿ ಅತ್ಯದ್ಬುತವಾದ ಔಷಧೀಯ ಗುಣಗಳು ಕೂಡ ಅಡಗಿವೆ. ಹಿಂದೆ ಹಳ್ಳಿಗಳಲ್ಲಿ ವಾಸಿಸುತ್ತಿರುವವರಿಗೆ ಮಾತ್ರ ಸೀಮಿತವಾಗಿದ್ದ ಹಲಸಿನ ಹಣ್ಣಿನ ಸೇವನೆ ಇದೀಗ ಪಟ್ಟಣಗಳಲ್ಲಿ ಸೂಪರ್ ಮಾರ್ಕೆಟ್‌ನಲ್ಲಿ ದೊರಕುತ್ತದೆ. ಹಲಸಿನ ಹಣ್ಣಿನಲ್ಲಿರುವ ಪೋಷಕಾಂಶಗಳು ಅನೇಕ ಸಮಸ್ಯೆಗಳಿಗೆ ರಾಮಬಾಣವಾಗಿದೆ ಎಂದು ಸಿರಿ ಸಂಘದ ಸಂಸ್ಥಾಪಕರಾದ ಪದ್ಮರಾಜು ತಿಳಿಸಿಕೊಟ್ಟು.

ಶ್ರೀಮತಿ ರೇಖಾ, ಆರ್ಥಿಕ ಸಲಹಗಾರರು ಹಾಗೂ ನಿರ್ದೇಶಕರು, ತಿಪಟೂರು ರೈತ ಉತ್ಪಾದಕರ ಸಂಘ, ಮಾತನಾಡಿ ಬ್ಯಾಂಕ್‌ಗಳ ಹಣಕಾಸಿನ ನೆರವಿನ ಮಾಹಿತಿಯನ್ನು ನೀಡಿದರು.

ಶ್ರೀಮತಿ ನವೀನ ಸದಾಶಿವಯ್ಯ, ಮಹಿಳಾ ಪ್ರಮುಖ್, ಭಾರತೀಯ ಕಿಸಾನ್ ಸಂಘ ತುಮಕೂರು ಜಿಲ್ಲಾ ಘಟಕ ಮಾತನಾಡಿ ರೈತರು ಮುಖ್ಯಬೆಳೆಗೆ ಸಿಗುವ ಬೆಳೆಯ ಬಗ್ಗೆ ಯೋಚಿಸಿ ಉಳಿದ ಬೆಳೆಗಳನ್ನು ನಿರ್ಲಕ್ಷಿಸುವುದು ಬೇಡ, ಪ್ರತಿಯೊಂದರ ಮೌಲ್ಯವರ್ಧನೆಯನ್ನು ಮಾಡಿ ಹಣಗಳಿಸಬಹುದು ಎಂದು ತಿಳಿಸಿಕೊಟ್ಟರು.

ಡಾ. ಸುಮನಾ, ಆಯುಷ್, ವೈದ್ಯಕೀಯ ಅಧಿಕಾರಿ ಮಾತನಾಡಿ ಹಲಸಿನ ಹಣ್ಣಿನಲ್ಲಿ ಹೇರಳವಾಗಿರುವ ಜೀವಸತ್ವಗಳು ದೇಹಕ್ಕೆ ತುಂಬಾ ಒಳ್ಳೆಯದು. ಹಲಸಿನ ಹಣ್ಣಿನಲ್ಲಿ ವಿಟಮಿನ್ ಸಿ ಮತ್ತು ವಿಟಮಿನ್ ಎ ಹೇರಳವಾಗಿ ಕಂಡುಬರುತ್ತದೆ. ಇದು ದೇಹದಲ್ಲಿ ಉತ್ಕರ್ಷಣ ನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆ, ಇದನ್ನು ಸೇವಿಸುವುದರಿಂದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಹಲಸಿನ ಹಣ್ಣು ಮತ್ತು ಬೀಜಗಳಿಂದ ತಯಾರಿಸಿದ ತಿನಿಸಿಗಳು ನೋಡುಗರ ಬಾಯಲ್ಲಿ ನಿರೂರುವಂತೆ ಮಾಡಿದವು. ಹಲಸಿನ ಪಕೋಡ/ಬೋಂಡ, ಹಲಸಿನ ದೋಸೆ, ಹಲಸಿನ ಹೋಳಿಗೆ, ಹಲಸಿನ ಹಪ್ಪಳ, ಹಲಸಿನ ಸೊಗೆಯಿಂದ ತಯಾರಿಸಿದ ಮಿಕ್ಸರ್, ಹಲಸಿನ ಸಾವಿಗೆ, ಹಲಸಿನ ಕೇಸರಿಬಾತ್, ಹಲಸಿನ ಬೀಜದ ಸೂಪ್ ತಯಾರುಸುವ ತರಬೇತಿ ನೀಡಲಾಯಿತು. ಹಳ್ಳಿ ಸಿರಿ ಸಿರಿ ಸಂಘದ ಮಂಜಮ್ಮ, ಸವಿತ, ಪುಷ್ಪಲತಾ ಮತ್ತು ಶಾನುವಾಜ್ ಹಲಸಿನ ಹಣ್ಣು ಮೌಲ್ಯವರ್ಧಿತ ಪದಾರ್ಥಗಳ ಪ್ರಾತ್ಯಕ್ಷಿಕೆಯನ್ನು ನೆರೆವೆರಿಸಿಕೊಟ್ಟರು

ಈ ಕಾರ್ಯಕ್ರಮದಲ್ಲಿ ತಡಸೂರು ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಪ್ರಯತ್ನವನ್ನು ಕೂಡ ಮಾಡಲಾಯಿತು. ಕಾರ್ಯಕ್ರಮದಲ್ಲಿ ತಿಪಟೂರು ಗ್ರಾಮಾಂತರ ಪೋಲಿಸ್ ವೃತ್ತ ನಿರೀಕ್ಷಕರು ಸಿದ್ಧರಾಮೇಶ್ವರ ಭಾಗವಹಿಸಿದ್ದರು. ಕೆ.ವಿ.ಕೆ ವಿಜ್ಞಾನಿಗಳಾದ ಡಾ. ನಿತ್ಯಾಶ್ರೀ ಕೆ., ಶ್ರೀ ದರ್ಶನ್, ಡಾ. ಕೀರ್ತಿಶಂಕರ್ ಕೆ, ಶ್ರೀ ಮನೋಜ್ ಹಾಗೂ ಇತರ ಸಿಬ್ಬಂದಿವರ್ಗದವರು ಹಾಗೂ ತಡಸೂರಿನ ನಾಗರಾಜು, ಯೋಗನಂದ ಮೂರ್ತಿ, ತ್ರಿವೇಣಿ ಮತ್ತು ಇತರೆ ಗ್ರಾಮಸ್ಥರು ಭಾಗವಹಿಸಿದರು.

# "ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ–2023"



ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಿಪಟೂರು ಹಾಗೂ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟ, ತಿಪಟೂರು ಇವರ ಸಂಯುಕ್ತ ಆಶ್ರಯದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ತಿಪಟೂರಿನಲ್ಲಿ "ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಪಲ್ಲವಿ, ಡಾ. ಆಶೀಶ್, ವಿಜ್ಞಾನಿಗಳು, ಭಾರತೀಯ ಹವಾಮಾನ ಇಲಾಖೆ, ಹೊಸ ದೆಹಲಿ ಮತ್ತು ಇತರ ಗಣ್ಯವ್ಯಕ್ತಿಗಳು ನೆರವೇರಿಸಿಕೊಟ್ಟರು.

ಶ್ರೀ ನಾಗರಾಜು ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ತಿಪಟೂರು ಮಾತನಾಡಿ ತಾಯಿಹಾಲನ್ನು ದ್ರವರೂಪದ ಬಂಗಾರವೆಂದು ಕರೆಯುತ್ತಾರೆ ಮತ್ತು ಪರಿಶುದ್ಧವಾಗಿ ಸಿಗುವ ಆಹಾರವೆಂದರೆ ಅದು ತಾಯಿಹಾಲು ಮಾತ್ರ ಎಂದು ತಿಳಿಸಿದರು. ಜೊತೆಗೆ ವಿಶ್ವ ಆರೋಗ್ಯ ಸಂಸ್ಥೆ, ತಾಯಂದಿರಿಗೆ ಮತ್ತು ಮಕ್ಕಳಿಗೆ ಸ್ತನ್ಯಪಾನ ಮೌಲ್ಯದ ಮಹತ್ವ ನೀಡುತ್ತದೆ ಎಂದು ತಿಳಿಸಿದರು. ಡಾ. ಸುಮನಾ, ಆಯುಷ್ ವೈದ್ಯಾಧಿಕಾರಿಗಳು ಆಯುಷ್ ಇಲಾಖೆ, ಕೊನೇಹಳ್ಳಿ, ತಿಪಟೂರು ಮಾತನಾಡಿ ಪ್ರತಿವರ್ಷ ಆಗಸ್ಟ್ 1 ರಿಂದ ಆಗಸ್ಟ್ 7 ರವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮವು ಜರುಗುತ್ತದೆ. ಮನೆಮದ್ದುಗಳನ್ನು ಉಪಯೋಗಿಸಿ ರೋಗಗಳನ್ನು ಹೇಗೆ ಕಡಿಮೆಮಾಡಿಕೊಳ್ಳುವುದು ಎನ್ನುವುದರ ಜೊತೆಗೆ ಅಮ್ಮನ ಎದೆಹಾಲಿನಷ್ಟೆ ಉತ್ತಮ ದೇಸಿ ಹಾಲು ಮತ್ತು ತುಪ್ಪ ಎಂದು ತಿಳಿಸಿದರು. ತಾಯಿಯ ಎದೆಹಾಲು ಮಗುವಿಗೆ ಕೊಡುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಿದರು.

ಡಾ. ಪವನ್ ಕುಮಾರ್, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹೊನ್ನವಳ್ಳಿ ಮಾತನಾಡಿ ಮಗುವಿಗೆ ಕನಿಷ್ಠ 6 ತಿಂಗಳುವರೆಗೆ ಎದೆಹಾಲನ್ನು ಕುಡಿಸಬೇಕು. ಎದೆಹಾಲು ಕುಡಿಯುವ ಮಕ್ಕಳಲ್ಲಿ ರೋನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೆ ಮಗುವಿಗೆ ಕನಿಷ್ಠ ಒಂದು ವರ್ಷಕ್ಕೂ ಹೆಚ್ಚು ಸ್ತನ್ಯಪಾನ ಮಾಡಿಸುವ ತಾಯಿಯೂ ಸ್ತನ್ಯಕ್ಯಾನ್ಸರ್ ನಂತಹ ಮೂಲ ರೋಗಗಳಿಗೆ ತುತ್ತಗುವುದಿಲ್ಲ, ಅದಕ್ಕೆಂದೇ ಸ್ತನ್ಯಪಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಪ್ರತಿ ತಾಯಿಗೂ ವೈದ್ಯರು ಸಲಹೆ ನೀಡುತ್ತಾರೆ. ತಾಯಿಯ ಹಾಲಿನಲ್ಲಿ ಸಾಕಷ್ಟು ಪೌಷ್ಟಿಕಾಂಶಗಳಿರುವುದರಿಂದ ಅದು ಮಗುವಿನ ಬೆಳವಣಿಗೆಗೆ ಸಹಕರಿಸುತ್ತದೆ ಅಲ್ಲದೆ ಮಗುವಿನ ಆರೋಗ್ಯವನ್ನು ಕಾಪಾಡುತ್ತದೆ ಮತ್ತು ಮಗುವನ್ನು ಬ್ಯಾಕ್ಟೀರಿಯಾ, ವೈರೆಸ್‌ಗಳಿಂದ ಹರಡುವ ಕಾಯಿಲೆಗಳಿಂದ ಕಾಪಾಡುತ್ತದೆ. ಶ್ರೀಮತಿ ಪಿ.ರೇಖಾ, ಆರ್ಥಿಕ ಸಮಲೋಜಕರು, ಆರ್ಥಿಕ ಸಾಕ್ಷರತಾ ಕೇಂದ್ರ, ತಿಪಟೂರು ಮಾತನಾಡಿ ಅಮೃತಕ್ಕೆ ಸಮನಾದ ತಾಯಿ ಎದೆಹಾಲಿನ ಪ್ರಾಮುಖ್ಯತೆಯನ್ನು ಮತ್ತು ತಾಯಿ ಮಗುವಿನ ಭಾಂದವ್ಯ ಹೇಗಿರುತ್ತದೆ ಎಂದು ತಿಳಿಸಿದರು. ಶ್ರೀಮತಿ ಎಂ.ಮಂಜುಳ, ಅಧ್ಯಕ್ಷರು, ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟ, ತಿಪಟೂರು ಮಾತನಾಡಿ ಮಗುವಿಗೆ ಜನ್ಮ ನೀಡುವುದು ಮಹಿಳೆಗೆ ಮರುಜನ್ಮವೆಂದು ಪರಿಗಣಿಸಲಾಗಿದೆ ಆದರೆ ಮೊದಲ ಭಾರಿಗೆ ತಾಯಿಯಾದವರಿಗೆ ಸ್ತನ್ಯಪನದ ಬಗ್ಗೆ ಸರಿಯಾದ ಜ್ಞಾನದ ಕೊರತೆಯಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿದ್ದ ಡಾ. ಶಿವಪ್ಪ ನಾಯಕ, ವಿಜ್ಞಾನಿಗಳು (ಪಶು ವಿಜ್ಞಾನ), ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಮಾತನಾಡಿ ವಿಶ್ವ ಸ್ತನ್ಯಾಪಾನ ಸಪ್ತಾಹದ ಉದ್ದೇಶವನ್ನು ಹಾಗು ಆಗಸ್ಟ್ ಮೊದಲವಾರವು ಸ್ತನ್ಯಪಾನವನ್ನು ಉತ್ತೇಜಿಸುತ್ತದೆ ಮತ್ತು ಪ್ರಪಚಂದಾದ್ಯಂತಹ ಮಹಿಳೆಯರಿಗೆ ತಮ್ಮ ಶಿಶುಗಳಿಗೆ ನಿರ್ದಿಷ್ಟ ಅವಧಿಯವರೆಗೆ ಹಾಲುಣಿಸಲು ಪ್ರೋತ್ಸಾಹಿಸುತ್ತದೆ ಎಂದು ತಿಳಿಸಿದರು. ಡಾ. ನಿತ್ಯಶ್ರೀ ಕೆ., ವಿಜ್ಞಾನಿಗಳು (ಗೃಹ ವಿಜ್ಞಾನ), ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ಮಾತನಾಡಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಎದೆಹಾಲು ಕುಡಿಯುವ ಶಿಶುಗಳ ಬುದ್ದಿವಂತಿಕೆ ಮತ್ತು ಆರೋಗ್ಯ ಉತ್ತಮವಾಗಿರುತ್ತದೆ. ಎದೆ ಹಾಲು ಕುಡಿಯುದ ಮಕ್ಕಳಿಗೆ ಹೋಲಿಸಿದರೆ, ಸ್ತನ್ಯಪಾನ ಮಾಡುವ ಮಕ್ಕಳು ಅತಿತೂಕ, ಬೋಜ್ಜು ಮತ್ತು ಡಯಾಬಿಟಿಸ್‌ಗಳಿಂದ ಬಳಲುವ ಸಾಧ್ಯತೆಯ ಕಡಿಮೆ ಎಂದು ತಿಳಿಸಿದರು.ಶ್ರೀಮತಿ ಬಿ.ಎನ್. ಪ್ರೇಮ, ಮೇಲ್ವಿಚಾರಿಕೆ ಇವರು ಮಾತನಾಡಿ ಆಗಸ್ಟ್ 1 ರಿಂದ 7ರವರೆಗೆ ತಾಲ್ಲೂಕಿನ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಿಸಿ ಗರ್ಭಿಣಿಯರು, ಬಾಣಂತಿಯರು ಹಾಗೂ ಪೋಷಕರಿಗೆ ಅರಿವು ಮಾಡಿಸಲಾಗುತ್ತದೆ ಎಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಗರ್ಭಿಣಿಯರು ಮಕ್ಕಳ ತಾಯಂದಿರು, ಅಂಗನವಾಡಿ ಕಾರ್ಯಕತೆಯರು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿ ಮಾಡಿದರು. ಕೆ.ವಿ.ಕೆ ವಿಜ್ಞಾನಿಗಳಾದ ಶ್ರೀ ದರ್ಶನ್ ಎಂ. ಈ., ಶ್ರೀ ಮನೋಜ್, ಡಾ. ಕೀರ್ತಿಶಂಕರ್, ಡಾ. ಪದ್ಮನಾಭನ್, ಡಾ. ಸತೀಶ್ ಮತ್ತು ಇತರೆ ಸಿಬ್ಬಂದಿವರ್ಗದವರು ಭಾಗವಹಿಸಿದರು

# ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳ



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ಐ,ಸಿ,ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ವತಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮತ್ತಿಘಟ್ಟ ಗಾಮದಲ್ಲಿ ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳವನ್ನು ಹಮ್ಮಿಕೊಳ್ಳಲಾಗ್ಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು ಆದ ಡಾ. ವಿ ಗೋವಿಂದ ಗೌಡ ಮಾತನಾಡಿ ನಮ್ಮ ರಾಜ್ಯದಲ್ಲಿ ರಾಗಿ, ಸಜ್ಜೆ, ನವಣೆ, ಬರಗು, ಹಾರಕ, ಸಾಮೆ, ಊದಲು, ಕೊರಲೆಯಂತಹ ಸಿರಿಧಾನ್ಯಗಳನ್ನು ನೋಡಬಹುದು ಆದರೆ ಇವುಗಳಲ್ಲಿ ಹೆಚ್ಚಾಗಿ ಬಳಸುವುದು

ರಾಗಿಯನ್ನು ಮಾತ್ರ ಇನ್ನುಳಿದ ಧಾನ್ಯಗಳನ್ನು ಉಪಯೋಗಿಸುವುದು ಕಡಿಮೆಯಾಗಿದೆ, ನಮ್ಮ ಪೂರ್ವಜರು ಹೆಚ್ಚಾಗಿ ಉಪಯೋಗಿಸುತ್ತಿದ್ದ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಮತ್ತು ಕೊರಲೆಯಿಂದ ಮಾಡುತ್ತಿದ್ದ ಅನ್ನ, ಮುದ್ದೆ, ರೊಟ್ಟಿ ಉತ್ತಮ ಆಹಾರವಾಗಿತ್ತು ಹಾಗೂ ಅವರು ಆರೋಗ್ಯವಂತರಾಗಿ ಬಲಿಷ್ಟರಾಗಿ ದಿನವೆಲ್ಲ ಕೆಲಸ ಮಾಡಿದರು ಆಯಾಸಗೊಳ್ಳುತ್ತಿರಲಿಲ್ಲ, ತಾನು ಚಿಕ್ಕವನಿದ್ದಾಗ ಹಳ್ಳಿಯಲ್ಲಿ ಹಾರಕದ ಅನ್ನಕ್ಕೆ ಮೊಸರು ಬೆರಸಿ ಸವಿಯುತ್ತಿದ್ದ ದಿನಗಳನ್ನು ಮೆಲುಕು ಹಾಕಿದರು. ಸಿರಿಧಾನ್ಯಗಳು ಭವಿಷ್ಯದ ಬೆಳೆಗಳಾಗಿವೆ, ಅತ್ಯಂತ ಸುಸ್ಥಿರ ಆಹಾರಗಳಾಗಿವೆ ಎನ್ನುವುದರ ಜೊತೆಗೆ ನಿತ್ಯ ಸಿರಿಧಾನ್ಯ ಸೇವಿಸಿ ರೋಗವನ್ನು ಓಡಿಸಿ ಎಂದು ಕರೆಕೊಟ್ಟರು.

ಶ್ರೀ. ದರ್ಶನ್ ಎಂ,ಈ ವಿಜ್ಞಾನಿಗಳು (ಕೃಷಿ ವಿಸ್ತರಣೆ) ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ ಸರ್ಕಾರವು 2023ವರ್ಷವನ್ನು ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿಲಾಗಿದೆ ಈ ನಿಟ್ಟಿನಲ್ಲಿ ಅನೇಕ ಸಿರಿಧಾನ್ಯಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ, ಅಂತಹ ಒಂದು ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಪಾಕ ಸ್ಪರ್ಧೆ/ಆಹಾರ ಮೇಳವು ಒಂದು. ಸಿರಿಧಾನ್ಯಗಳು ಅನೇಕ ತಲೆಮಾರುಗಳಿಂದ ನಮ್ಮ ಆಹಾರದ ಅವಿಭಾಜ್ಯ ಅಂಗವಾಗಿದ್ದು ಇತ್ತಿಚಿನ ದಿನಗಳವರೆಗೂ ಮರೆತು ಹೊಗಿವೆ. ಈ ನಿಟ್ಟಿನಲ್ಲಿ ಸಿರಿಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಅವಶ್ಯಕತೆಯಿದೆ, ಆದ್ದರಿಂದ ಸ್ತ್ರೀಶಕ್ತಿ ಸಂಘಗಳು ಹೆಚ್ಚು ಸಿರಿಧಾನ್ಯ ಆಧಾರಿತ ಆಹಾರ ಪಧಾರ್ಥಗಳ ಉತ್ಪಾದನೆ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ತಿಳಿಸಿದರು.

ಡಾ. ನಿತ್ಯಶ್ರೀ, ಕೆ ವಿಜ್ಞಾನಿಗಳು (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ ಸಿರಿಧಾನ್ಯಗಳಲ್ಲಿ ಪೌಷ್ಟಿಕಾಂಶಗಳ ಭಂಡಾರವೇ ಅಡಗಿದೆ ಮನುಷ್ಯನ ಆರೋಗ್ಯಕ್ಕೆ ಬೇಕಾಗಿರುವ ಎಲ್ಲಾ ಬಗೆಯ ಪೌಷ್ಟಿಕ ಸತ್ವಗಳು ಕೂಡ ಸಿರಿಧಾನ್ಯಗಳಲ್ಲಿ ಕಂಡುಬರುತ್ತದೆ, ಕೆಲವು ಸಿರಿಧಾನ್ಯಗಳಲ್ಲಿ ನಾರಿನಾಂಶ ಹೆಚ್ಚಿರುತ್ತದೆ ಇನ್ನೂ ಕೆಲವು ಧಾನ್ಯಗಳಲ್ಲಿ ಅಕ್ಕಿ ಮತ್ತು ಗೋಧಿಗಿಂತ ಹೆಚ್ಚಿನ ಕ್ಯಾಲ್ಸಿಯಂ ಮತ್ತು ಖನಿಜಗಳು ಇರುತ್ತದೆ. ಪ್ರತಿ ಧಾನ್ಯಗಳು ತನ್ನದೇ ಆದ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ರುಚಿ ರುಚಿಯಾದ ಸಿರಿಧಾನ್ಯಗಳ ಪಾಕಗಳು ನೋಡುಗರ ಬಾಯಲ್ಲಿ ನೀರೂರಿಸಿದವು. ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಪೌಷ್ಟಿಕಾಂಶದ ಮಹತ್ವಗಳು, ಬಳಕೆಯ ವಿಧಾನಗಳು, ಆರೋಗ್ಯಕರ ಅಂಶಗಳ ಪ್ರಯೋಜನಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಯಿತು. ಜೊತೆಗೆ ರೈತರಿಗೆ ಉತ್ತಮ ಆದಾಯವನ್ನು ಪಡೆಯಲು ಸಹಾಯ ಮಾಡುವುದು ಕೂಡ ಇದರ ಉದ್ದೇಶವಾಗಿದೆ. 35 ರೈತ ಮಹಿಳೆಯರು ಭಾಗವಹಿಸಿ ಸಿರಿಧಾನ್ಯಗಳ ವಿವಿಧ ಪದಾರ್ಥಗಳಾದ ರಾಗಿ ದೋಸೆ, ರಾಗಿ ಶಾವಿಗೆ, ರಾಗಿ ಹಲ್ವ, ರಾಗಿ ಲಡ್ಡು, ರಾಗಿ ಉಪ್ಪಿಟ್ಟು, ರಾಗಿ ಹುರಿಹಿಟ್ಟು, ರಾಗಿ ಪಡ್ಡು, ರಾಗಿ ಇಡ್ಲಿ, ರಾಗಿ ಪಕೋಡ, ರಾಗಿ ಹಾಲಬಾಯಿ, ರಾಗಿ ಮಿಟಾಯಿ, ಹಾರಕದ ಖಾರ, ಹಾರಕ ಲಡ್ಡು, ಸಿರಿಧಾನ್ಯಗಳ ಹಪ್ಪಳ, ನವಣೆ ಚಕ್ಕುಲಿ, ನವಣೆ ಪಾಯಸ, ನವಣೆ ಪಲಾವ್, ಸಾಮೆ ಲಡ್ಡು ಹಾಗು ಇತರೆ ಪದಾರ್ಥಗಳನ್ನು ಪ್ರದರ್ಶನಕ್ಕೆ ಸಿದ್ಧಪಡಿಸಿ ತಂದಿದ್ದರು. ಕಾರ್ಯಕ್ರಮದಲ್ಲಿ ಶ್ರೀಮತಿ ಕೀರ್ತಿ ಪ್ರಭಾ, ನಬಾರ್ಡ್ ಡಿ.ಡಿ.ಎಮ್, ತುಮಕೂರು, ಶ್ರೀಮತಿ ಗೌರಮ್ಮ ಎನ್,ಆರ್,ಎಲ್,ಎಂ, ಅದ್ಯಕ್ಷರು, ಹಂದನಕೆರೆ, ಶ್ರೀಮತಿ ರಂಗಮ್ಮ ಎನ್,ಆರ್,ಎಲ್,ಎಂ ಮುಖ್ಯ ಪುಸ್ತಕ ಬರಹಗಾರರು, ಲಕ್ಷೀಕಾಂತ ಯೋಜನಾ ಸಮನ್ವಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತಿಘಟ್ಟ, ನೆಲ ಜಲ ರೈತ ಉತ್ಪಾದಕ ಕಂಪನಿಯ ಅದ್ಯಕ್ಷರಾದಂತಹ ಜ್ಞಾನೋದಯ ಮತ್ತು ಸಿಬ್ಬಂದಿ ವರ್ಗ, ಹಂದನಕೆರೆ, ಚಿಕ್ಕನಾಯನಹಳ್ಳಿ ರೈತ ಉತ್ಪಾದಕ ಕಂಪನಿಯ ಅದ್ಯಕ್ಷರಾದಂತಹ ಗಂಗಾಧರಯ್ಯ ಹಾಗು ರೈತ ಮತ್ತು ರೈತ ಮಹಿಳೆಯರು ಹಾಜರಿದ್ದರು.

# ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿ)" ಪರಿಸರ ಕೃಷಿ ವಿಧಾನಗಳು" ಕುರಿತು ತರಬೇತಿ

(ದಿನಾಂಕ 28.08.2023 ರಿಂದ 02.09.2023 ರವರೆಗೆ 6 ದಿನಗಳ ತರಬೇತಿ ಕಾರ್ಯಕ್ರಮ)




ಕೃಷಿ ಜೀವನೋಪಾಯ ಚಟುವಟಿಕೆಗಳಿಗೆ ಸಂಬಂಧಿಸಿದ ವಿವಿಧ ಬಗೆಯ ಸೇವೆಗಳನ್ನು ಕೃಷಿಕರಿಗೆ ವಿಸ್ತರಿಸಲು ಅನುಕೂಲವಾಗಲು ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿ) ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತಿ, ತುಮಕೂರು ಇವರ ಸಹಯೋಗದೊಂದಿಗೆ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿಯಲ್ಲಿ 6 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಶ್ರೀಯುತ ಸಿದ್ದರಾಮೇಶ್ವರ, ವೃತ್ತ ನಿರೀಕ್ಷಕರು, ತಿಪಟೂರು ಗ್ರಾಮಾಂತರ ಠಾಣೆ ಉದ್ಘಾಟಿಸಿ ಮಾತನಾಡಿ ಕೃಷಿ ಸಖಿ ಎಂಬ ಯೋಜನೆ ಹೊಸ ಕಲ್ಪನೆಯಾಗಿದ್ದು ಇದರಿಂದ ಗ್ರಾಮ ಮಟ್ಟದಲ್ಲಿ ರೈತರಿಗೆ ಕೃಷಿ ಇಲಾಖೆ, ವಿಶ್ವವಿದ್ಯಾನಿಲಯಗಳ, ಕೃಷಿ ವಿಜ್ಞಾನ ಕೇಂದ್ರದ ಅನೇಕ ಕಾರ್ಯಕ್ರಮಗಳನ್ನು ತಲುಪಿಸಲು ನೆರವಾಗುತ್ತದೆ. ಕೃಷಿ ಸಖಿಯರು ಎಲ್ಲಾ ಇಲಾಖೆಗಳ ಜೊತೆಗೂಡಿ ರೈತ ಹಾಗೂ ಅಭಿವೃದ್ಧಿ ಇಲಾಖೆಗಳ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸಬೇಕೆಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀಯುತ ಯೋಗಾನಂದ ಮೂರ್ತಿ ಪ್ರಗತಿ ಪರ ರೈತರು ತಡಸೂರು ಗ್ರಾಮ, ಮಾತನಾಡಿ ಶೇ. 70 ರಷ್ಟು ಮಹಿಳೆಯರು ಕೃಷಿಯಲ್ಲಿ ತೊಡಗಿರುವುದರಿಂದ ಕೃಷಿ ಸಖಿಯರ ಲಾಭವನ್ನು ಪಡೆಯಬಹುದು ಎಂದು ಹೇಳಿದರು. ಮುಂದುವರೆದು ಕೃಷಿಯಲ್ಲಿ ಮಹಿಳೆಯರ ಪಾತ್ರ ಬಹು ಮುಖ್ಯವಾಗಿದ್ದು ಮೌಲ್ಯವರ್ದನೆ, ಕೈತೋಟ, ಅಣಬೆ ಬೇಸಾಯ, ಜೇನು ಕೃಷಿ ಮುಂತಾದ ಆಧುನಿಕ ಪದ್ದಿತಿಗಳನ್ನು ಅಳವಡಿಸಿಕೊಂಡರೆ ಅಧಿಕ ಲಾಭ ಪಡೆಯಬಹುದು ಎಂದು ಕರೆಕೊಟ್ಟರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತಹ ಡಾ. ಗೋವಿಂದ ಗೌಡ ವಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮಾತನಾಡಿ, ಕೃಷಿ ಸಖಿಯರನ್ನು ತುಮಕೂರು ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಂದ ಒಬ್ಬರಂತೆ ಆಯ್ಕೆ ಮಾಡಿ ಕೃಷಿ ಸಖಿಯರಿಗೆ ವಿವರವಾದ ಮತ್ತು ರಚನಾತ್ಮಕ ತರಬೇತಿಯನ್ನು ನೀಡಲಾಗುತ್ತದೆ. ಸಣ್ಣ ಮತ್ತು ಅತೀ ಸಣ್ಣ ರೈತ, ಮಹಿಳಾ ರೈತ ಕುಟುಂಬಗಳಿಗೆ ಅಗತ್ಯವಿರುವ ತಾಂತ್ರಿಕ ಜ್ಞಾನ ಮತ್ತು ಮೌಲ್ಯವರ್ಧನೆ ಮಾಡುವ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಕೃಷಿ ಜೀವನೋಪಾಯಕ್ಕೆ ನೆರವಾಗುವಂತೆ ವಿವಿಧ ಕೃಷಿ ವಿಷಯಾಧಾರಿತ ತರಬೇತಿಗಳನ್ನು ನೀಡಲು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹಾಗೂ ವಿವಿಧ ಸಂಸ್ಥೆಗಳಿಂದ ಸಂಪನ್ಮೂಲ ವ್ಯಕ್ತಿಯನ್ನು ಗುರುತಿಸಿ ಅವರಿಂದ ಕೃಷಿ ಸಖಿಯರಿಗೆ ಆರು ದಿನಗಳ ತರಬೇತಿಯನ್ನು ನೀಡಲಾಗುತ್ತದೆ, ಇದರಿಂದಾಗಿ ಕೃಷಿ ಸಖಿಯರ ಜ್ಞಾನಾಭಿವೃದ್ಧಿ ಮತ್ತು ಮನೋಬಲ ಹೆಚ್ಚಿಸಲು ಈ ತರಬೇತಿ ಅನುಕೂಲವಾಗುತ್ತದೆ. ರೈತರ ಮನೆಬಾಗಿಲಿಗೆ ಕೃಷಿ ತಂತ್ರಜ್ಞಾನಗಳನ್ನು ತಲುಪಿಸುವಲ್ಲಿ ತಳ ಹಂತದ ಕಾರ್ಯಕರ್ತರ ಅವಶ್ಯಕತೆಯಿದ್ದು, ಕೃಷಿ ಸಖಿಯರು ಈ ತರಬೇತಿಯನ್ನು ಸದುಪಯೋಗ ಪಡೆದು ರೈತರಿಗೆ ತಲುಪಿಸಬೇಕೆಂದರು.

ಈ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳಾದ ಡಾ. ಶಿವಪ್ಪ ನಾಯಕ, ಡಾ. ಕೀರ್ತಿಶಂಕರ್, ಕೆ. ಡಾ. ನಿತ್ಯಶ್ರೀ, ಕೆ, ಶ್ರೀ. ಮನೋಜ್, ಹಾಗೂ ಸಿಬ್ಬಂದಿ ವರ್ಗ, ಸುಜಾತ, ವೀಣಾ, ಕೃಷಿ ಸಖಿಯರು ಉಪಸ್ಥಿತರಿದ್ದರು.

## ಮೆಣಸಿನಕಾಯಿ ಬೆಳೆವ ರೈತರಿಗೆ ಅರ್ಕ ಗಗನ್ ತಳಿ ಪರಿಚಯ

ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಮೆಣಸಿನಕಾಯಿಯ ನೂತನ ತಳಿಯಾದ ಅರ್ಕ ಗಗನ್ ಕುರಿತು ತಿಪಟೂರು ತಾಲ್ಲೂಕಿನ ಪರುವಗೊಂಡನಹಳ್ಳಿ ಮುಂಚೂಣಿ ಕ್ಷೇತ್ರ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.



ಕೇಂದ್ರದ ತೋಟಗಾರಿಕಾ ವಿಜ್ಞಾನಿಗಳಾದ ಡಾ. ಕೀರ್ತಿಶಂಕರ್ ಕೆ.,ರವರು ಮಾತನಾಡಿ ಅರ್ಕ ಗಗನ್ ತಳಿಯನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಹೆಸರಘಟ್ಟ, ಬೆಂಗಳೂರು ರವರು ಬಿಡುಗಡೆ ಮಾಡಿದ್ದು, ಈ ತಳಿಯು ಹಸಿರು ಮೆಣಸಿನಕಾಯಿಗೆ ಸೂಕ್ತವಾಗಿದೆ, ಮತ್ತು ಎಕೆರೆಗೆ ಸುಮಾರು 80-100 ಕ್ವಿ ರವರೆಗೂ ಇಳುವರಿಯನ್ನು ಪಡೆಯಬಹುದು ಎಂದು ಕರೆಕೊಟ್ಟರು. ನಾಟಿ ಮಾಡಿದ ತಿಂಗಳ ನಂತರ ತರಕಾರಿ ಸ್ಪೆಷಲ್ ಲಘು ಪೋಷಕಾಂಶವನ್ನು ಪ್ರತೀ ಲೀಟರ್ ನೀರಿಗೆ 5ಗ್ರಾಂ ನಂತೆ ಮಿಶ್ರಣ ಮಾಡಿ ಸಿಂಪಡಿಸುಚುದರಿಂದ ಉತ್ತಮ ಗುಣಮಟ್ಟ ಮತ್ತು ಇಳುವರಿಯನ್ನು ಪಡೆಯಬಹುದಾಗಿದೆ ಎಂದು ತಿಳಿಸಿಕೊಟ್ಟರು.

ಮುಂದುವರೆದು ರೈತರಿಗೆ ಮೆಣಸಿನಕಾಯಿಯಲ್ಲಿ ಬರುವ ರೋಗಗಳಾದ ಸಸಿ ಕೊಳೆ ರೋಗ, ಚಿಬ್ಬುರೋಗ, ಬೂದಿರೋಗ ಮತ್ತು ಮೆಟರು ರೋಗಗಳ ಲಕ್ಷಣಗಳು ಮತ್ತು ಅವುಗಳ ಸಮಗ್ರ ನಿರ್ವಹಣೆಯನ್ನು ತಿಳಿಸಿಕೊಟ್ಟರು.

5 ಜನ ರೈತರಿಗೆ ಮುಂಚೂಣಿ ಕ್ಷೇತ್ರ ಪ್ರಾತ್ಯಕ್ಷಿಕೆಯಡಿಯಲ್ಲಿ ಅರ್ಕಾ ಗಗನ್ ತಳಿಯ ಸಸಿಗಳನ್ನು ನೀಡಲಾಯಿತು. ಸುಮಾರು 30 ಕ್ಕೂ ಹೆಚ್ಚು ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## ತರಬೇತಿ ಕಾರ್ಯಕ್ರಮಗಳು

### ಒಳ ಅವರಣ ತರಬೇತಿಗಳು

| ಕ್ರ.. ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ರೇಷ್ಮೆ ಕೃಷಿ, ಜೇನು ಸಾಕಣೆ, ಹೈನುಗಾರಿಕೆ, ಕೋಳಿ ಸಾಕಣೆ, ಜಲಚರ ಸಾಕಣೆ ಮತ್ತು ಭೌತಿಕ ನೀರಿನ ಪರೀಕ್ಷೆಯ ಮೇಲೆ ಪರಿಚಯ ತರಬೇತಿ | 15/07/2023 | 91 |
| 2 | ಆರೋಗ್ಯಕರ ಜೀವನ ಶೈಲಿಗೆ ಪೌಷ್ಟಿಕ ಕೈತೋಟ ಮತ್ತು ಸಿರಿಧಾನ್ಯಗಳ ಮಹತ್ವ | 16/07/2023 | 48 |
| 3 | ರಾಷ್ಟ್ರೀಯ ಪೋಷಣಾ ಅಭಿಯಾನ 2023 | 07/09/2023 | 38 |
| 4 | ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಪ್ರಾಮುಖ್ಯತೆ | 16/09/2023 | 37 |
| 5 | ರೈತ ಮಹಿಳೆಯರಿಗೆ ಪೌಷ್ಟಿಕ ಕೈತೋಟದ ಮಹತ್ವದ ಕುರಿತು ತರಬೇತಿ | 26/09/2023 | 35 |
| 6 | ಬೆಟ್ಟದನೆಲ್ಲಿ ಕ್ಯಾಂಡಿ, ಸಿರಿಧಾನ್ಯ ಹೆಲ್ತ್ ಮಿಕ್ಸ್, ಕರೋಂಡ ಉಪ್ಪಿನಕಾಯಿ ತಯಾರಿಕೆ | 29/09/2023 | 38 |

## ಹೊರಾವರಣ ತರಬೇತಿಗಳು

| ಕ್ರ.. ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳ ು |
|---|---|---|---|---|
| 1 | ಸಾಮೆಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಪ್ರಾತ್ಯಕ್ಷಿಕೆ | ಯಳನಾಡು, ಚಿ.ನಾ. ಹಳ್ಳಿ ತಾ. | 05/07/2023 | 28 |
| 2 | ನವಣೆಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಪ್ರಾತ್ಯಕ್ಷಿಕೆ | ಯಳನಾಡು, ಚಿ.ನಾ. ಹಳ್ಳಿ ತಾ. | 05/07/2023 | 32 |
| 3 | ಬಾಳೆಯ ಸಮಗ್ರ ಬೆಳೆ ನಿರ್ವಹಣೆ | ಬೊಮ್ಮರಸನಹಳ್ಳಿ, ಗುಬ್ಬಿ ತಾ. | 07/07/2023 | 29 |
| 4 | ಮಳೆಯಾಶ್ರಿತ ಪದ್ಧತಿಯಲ್ಲಿ ಅಂತರಬೆಳೆಯಾಗಿ ತೊಗರಿ ಮತ್ತು ನವಣೆ | ಇಪ್ಪಾಡಿ, ಕುಣಿಗಲ್ ತಾ. | 15/07/2023 | 36 |
| 5 | ಹಸಲು ಮೌಲ್ಯವರ್ಧಿತ ಪದಾರ್ಥಗಳ ಪ್ರಾತ್ಯಕ್ಷಿಕೆ | ತಡಸೂರು, ತಿಪಟೂರು ತಾ. | 26/07/2023 | 100 |
| 6 | ರೈತಾಪಿಕುಂಟುಬಗಳ ಪೌಷ್ಟಿಕ ಭದ್ರತೆಗಾಗಿ ಪೌಷ್ಟಿಕ ಕೈತೋಟ | ಪರುವಗೊಂಡನಹಳ್ಳಿ | 07/08/2023 | 20 |
| 7 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮತ್ತು ಅದರ ಮಾರುಕಟ್ಟೆ ವ್ಯವಸ್ಥೆ | ಹಂದನಕೆರೆ | 04/08/2023 | 23 |
| 8 | ತೆಂಗಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | ಹಂದನಕೆರೆ | 04/08/2023 | 23 |
| 9 | ತೊಗರಿ ಮತ್ತು ಅಲಸಂಧೆಯ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಇಪ್ಪಾಡಿ | 10/08/2023 | 20 |
| 10 | ಮೆಣಸಿನಕಾಯಿಯ ಸಮಗ್ರ ಬೆಳೆ ನಿರ್ವಹಣೆ | ಪರುವಗೊಂಡನಹಳ್ಳಿ | 15/08/2023 | 23 |
| 11 | ದಾಳಿಂಬೆ ಬೆಳೆಯ ಗುಣಮಟ್ಟ ಮತ್ತು ರೋಗದ ನಿರ್ವಹಣೆಯಲ್ಲಿ ಸೂಕ್ಷ್ಮಾಣು ಜೀವಿಗಳ ಸಮೂಹದ ಪ್ರಾಮುಖ್ಯತೆ | ಪರುವಗೊಂಡನಹಳ್ಳಿ | 12/09/2023 | 10 |
| 12 | ನರ್ಸರಿ ನಿರ್ವಹಣೆ | ಬುಲ್ಲೇನಹಳ್ಳಿ | 19/09/2023 | 12 |
| 13 | ಮಾವಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | ಇಪ್ಪಾಡಿ | 27/09/2023 | 32 |
| 14 | ದಾಳಿಂಬೆ ಬೆಳೆಯ ಗುಣಮಟ್ಟ ಮತ್ತು ಆರೋಗ್ಯ ನಿರ್ವಹಣೆಯಲ್ಲಿ ಸೂಕ್ಷ್ಮಾಣು ಜೀವಿಗಳ ಸಮೂಹದ ಪ್ರಾಮುಖ್ಯತೆ | ಪರುವಗೊಂಡನಹಳ್ಳಿ | 12/09/2023 | 10 |
| 15 | ನರ್ಸರಿ ನಿರ್ವಹಣೆ | ಬುಲ್ಲೇನಹಳ್ಳಿ | 19/09/2023 | 12 |
| 16 | ಮಾವಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | ಇಪ್ಪಾಡಿ | 27/09/2023 | 32 |
| 17 | ಹೆಬ್ಬಾಳ ಅವರೆ ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ | ದೇವಿಹಳ್ಳಿ | 27/09/2023 | 33 |
| 18 | ಶುಂಠಿ ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ | ಇಪ್ಪಾಡಿ | 27/09/2023 | 28 |
| 19 | ತೆಂಗಿನ ಮೌಲ್ಯವರ್ಧಿತ ಉತ್ಪನ್ನಗಳು | ಇಪ್ಪಾಡಿ | 27/09/2023 | 28 |

## ಪ್ರಾಯೋಜಿತ ತರಬೇತಿಗಳು

| ಕ್ರ. ಸಂ. | ವಿಷಯ | ಪ್ರಯೋಜಿತ ಸಂಸ್ಥೆ | ದಿನಾಂಕ | ಒಟ್ಟು |
|---|---|---|---|---|
| 1 | ಕೃಷಿ ಸಖಿ | ಸಂಜೀವಿನಿ | 04/09/2023 ರಿಂದ 10/09/2023 | 36 |
| 2 | ಕೃಷಿ ಸಖಿ | ಸಂಜೀವಿನಿ | 11/09/2023 ರಿಂದ 16/09/2023 | 36 |
| 3 | ಕೃಷಿ ಸಖಿ | ಸಂಜೀವಿನಿ | 25/09/2023 ರಿಂದ 30/09/2023 | 36 |

## ಪ್ರಮುಖ ದಿನಗಳು/ ಕಾರ್ಯಕ್ರಮಗಳು

| ಕ್ರ..ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು |
|---|---|---|---|---|
| 1 | ಭಾ.ಕೃ.ಅ.ಪ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪೌಷ್ಠಿಕ ಕೈತೋಟದ ನಿರ್ಮಾಣದ ಪ್ರಾಮುಖ್ಯತೆ ತರಬೇತಿ | ಕೃ.ವಿ. ಕೇಂದ್ರ, ಕೊನೇಹಳ್ಳಿ | 16/07/2023 | 33 |
| 2 | ಭಾ.ಕೃ.ಅ.ಪ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಹೈನುಗಾರಿಕೆ ಆಧಾರಿತ ಕೃಷಿ ವಿಧಾನಗಳು ಮತ್ತು ಅದರ ಉತ್ಪನ್ನಗಳು ಕುರಿತು ತರಬೇತಿ | ಕೃ. ವಿ. ಕೇಂದ್ರ, ಕೊನೇಹಳ್ಳಿ | 17/07/2023 | 51 |
| 3 | ಭಾ.ಕೃ.ಅ.ಪ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಾಳಿಂಬೆ ಮತ್ತು ಭತ್ತ ಬೆಳೆಯ ಸಮಗ್ರ ಬೆಳೆ ನಿರ್ವಹಣೆಯ ತರಬೇತಿ | ಕೃ. ವಿ. ಕೇಂದ್ರ, ಕೊನೇಹಳ್ಳಿ | 18/07/2023 | 45 |
| 4 | ಪಿ.ಎಂ. ಕಿಸಾನ್ ಸಮ್ಮೇಳನ ಕಾರ್ಯಕ್ರಮ | ಕೃ. ವಿ. ಕೇಂದ್ರ, ಕೊನೇಹಳ್ಳಿ | 27/07/2023 | 48 |
| 5 | ವಿಶ್ವ ಸ್ಥನ್ಯಪಾನ ಸಪ್ತಾಹ ಆಚರಣೆ | ಕೃ. ವಿ. ಕೇಂದ್ರ, ಕೊನೇಹಳ್ಳಿ | 01/08/2023 | 80 |
| 6 | ಸಿರಿಧಾನ್ಯ ಖಾದ್ಯಗಳ ತಯಾರಿಕೆಯ ಸ್ಪರ್ಧೆ | ಮತ್ತಿಘಟ್ಟ, ಚಿ.ನಾ. ಹಳ್ಳಿ ತಾಲ್ಲೂಕು | 09/08/2023 | 70 |
| 7 | 77ನೇ ಸ್ವಾತಂತ್ರ್ಯ ದಿನಾಚರಣೆ | ಕೃ. ವಿ. ಕೇಂದ್ರ, ಕೊನೇಹಳ್ಳಿ | 15/08/2023 | 50 |
| 8 | ಸಿರಿಧಾನ್ಯ ಖಾದ್ಯ ತಯಾರಿಕೆ ಸ್ಪರ್ಧೆ | ಇಪ್ಪಾಡಿ, ಕುಣಿಗಲ್ ತಾಲ್ಲೂಕು | 18/08/2023 | 80 |
| 9 | ಪಾರ್ಥೇನಿಯಂ ಅರಿವು ಸಪ್ತಾಹ | ಕೃ. ವಿ. ಕೇಂದ್ರ, ಕೊನೇಹಳ್ಳಿ | 16 ರಿಂದ 18/08/2023 | 40 |
| 10 | ಸ್ವಚ್ಛತಾ ಕಾರ್ಯಕ್ರಮ | ಕೃ. ವಿ. ಕೇಂದ್ರ, ಕೊನೇಹಳ್ಳಿ | 02/10/2023 ರಿಂದ 09/10/2023 | 128 |
| 11 | ರಾಗಿ ಸಂವರ್ಧನೆ ಕಾರ್ಯಕ್ರಮ | ಕೃ. ವಿ. ಕೇಂದ್ರ, ಕೊನೇಹಳ್ಳಿ | 07/09/2023 | 48 |
| 12 | ಸಿರಿಧಾನ್ಯ ವಿವಿಧ ಖಾದ್ಯ ತಯಾರಿಕೆಯ ಸ್ಪರ್ಧೆ | ಪರುವಗೊಂಡನಹಳ್ಳಿ | 15/09/2023 | 50 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 05/07/2023 | ಆಫಿಡ್ಸ್ ಭಾದಿತ ಅಲಸಂದೆ ತಾಕಿಗೆ ಕ್ಷೇತ್ರ ಭೇಟಿ | ಬಂದರೆಹಳ್ಳಿ | 12 |
| 2 | 07/07/2023 | ಸಮಸ್ಯಾತ್ಮಕ ತೊಗರಿ + ನವಣೆ ತಾಕು ಕ್ಷೇತ್ರ ಭೇಟಿ | ಇಪ್ಪಾಡಿ | 15 |
| 3 | 15/07/2023 | ಸಮಸ್ಯಾತ್ಮಕ ಬಾಳೆ ತೋಟ ಕ್ಷೇತ್ರ ಭೇಟಿ | ಬೊಮ್ಮರಸನಹಳ್ಳಿ | 11 |
| 4 | 10/08/2023 | ಸಮಸ್ಯಾತ್ಮಕ ತೊಗರಿ ತಾಕು ಕ್ಷೇತ್ರ ಭೇಟಿ | ಇಪ್ಪಾಡಿ | 13 |
| 5 | 12/08/2023 | ಸಮಸ್ಯಾತ್ಮಕ ದಾಳಿಂಬೆ ತಾಕಿಗೆ ಕ್ಷೇತ್ರ ಭೇಟಿ | ಮೈಲನಹಳ್ಳಿ | 24 |
| 6 | 11/09/2023 | ಸಮಸ್ಯಾತ್ಮಕ ನವಣೆ ತಾಕಿಗೆ ಕ್ಷೇತ್ರ ಭೇಟಿ | ಪರುವಗೊಂಡನಹಳ್ಳಿ | 16 |
| 7 | 14/09/2023 | ಸಮಸ್ಯಾತ್ಮಕ ಪೌಷ್ಟಿಕ ಕೈತೋಟ ಕ್ಷೇತ್ರ ಭೇಟಿ | ಪರುವಗೊಂಡನಹಳ್ಳಿ | 14 |

## ಪದ್ದತಿ ಪ್ರಾತ್ಯಕ್ಷಿಕೆ

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 11/07/2023 | ಮಣ್ಣಿನ ಮಾದರಿ ಸಂಗ್ರಹಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಇಪ್ಪಾಡಿ, ಕುಣಿಗಲ್ | 20 |
| 2 | 14/08/2023 | ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ | ಕೃ. ವಿ.ಕೇಂದ್ರ, ಕೊನೇಹಳ್ಳಿ | 16 |
| 3 | 11/09/2023 | ಬೀಜೋಪಚಾರ ಮತ್ತು ಬಿತ್ತನೆ ಪದ್ಧತಿ ಪ್ರಾತ್ಯಕ್ಷಿಕೆ | ಕೃ. ವಿ. ಕೇಂದ್ರ, ಕೊನೇಹಳ್ಳಿ | 14 |

## ವಿಜ್ಞಾನಿಗಳು ರೈತರಿಗೆ ನೀಡಿದ ಅತಿಥಿ ಉಪನ್ಯಾಸಗಳು

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 07/07/2023 | ಬಾಳೆ ಬೆಳೆ ಸಮಗ್ರ ನಿರ್ವಹಣೆ | ಬೊಮ್ಮಸಂದ್ರ | 29 |
| 2 | 18/07/2023 | ದಾಳಿಂಬೆ ಸಮಗ್ರ ಬೆಳೆ ನಿರ್ವಹಣೆ | ಕೃ. ವಿ. ಕೇಂದ್ರ, ಕೊನೇಹಳ್ಳಿ | 45 |
| 3 | 10/08/2023 | ತೊಗರಿ ಬೆಳೆಯ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಇಪ್ಪಾಡಿ | 20 |
| 4 | 28/08/2023 | ಪೌಷ್ಟಿಕ ತೋಟದ ಮಹತ್ವ | ಕೃ. ವಿ. ಕೇಂದ್ರ, ಕೊನೇಹಳ್ಳಿ | 36 |
| 5 | 05/09/2023 | ರಾಷ್ಟ್ರೀಯ ಪೌಷ್ಟಿಕ ಸಪ್ತಾಹ | ಕೃ. ವಿ. ಕೇಂದ್ರ, ಕೊನೇಹಳ್ಳಿ | 38 |
| 6 | 08/09/2023 | ಬೆಣ್ಣೆ ಹಣ್ಣು ಮತ್ತು ಡ್ರಾಗನ್ ಹಣ್ಣಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | ಡಿ.ಎ.ಟಿ.ಸಿ. ಲಿಂಗದಹಳ್ಳಿ | 45 |
| 7 | 28/09/2023 | ತೋಟಗಾರಿಕೆ ಬೆಳೆಗಳಲ್ಲಿ ನೀರು ಮತ್ತು ಪೋಷಕಾಂಶಗಳ ನಿರ್ವಹಣೆ | ಕೃ. ವಿ. ಕೇಂದ್ರ, ಕೊನೇಹಳ್ಳಿ | 28 |

## ರೈತರ ತಾಕಿಗೆ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ವಿಷಯ | ಸ್ಥಳ | ಒಟ್ಟು |
|---|---|---|---|---|
| 1 | 07/07/2023 | ಎಲಕ್ಕಿ ಬಾಳೆ ತಾಕಿಗೆ ಕ್ಷೇತ್ರ ಭೇಟಿ | ಬೊಮ್ಮರಸನಹಳ್ಳಿ | 12 |
| 2 | 15/07/2023 | ನವಣೆ + ತೊಗರಿ ಮಿಶ್ರಬೆಳೆ ತಾಕಿಗೆ ಕ್ಷೇತ್ರ ಭೇಟಿ | ಇಪ್ಪಾಡಿ | 14 |
| 3 | 04/08/2023 | ಅಲಸಂಧೆ ಬೆಳೆ ತಾಕಿಗೆ ಕ್ಷೇತ್ರ ಭೇಟಿ | ಬಂದರೆಹಳ್ಳಿ | 6 |
| 4 | 21/08/2023 | ಕೃಷಿ ಮೇಳಕ್ಕೆ ತಿಪಟೂರು ತಾಲ್ಲೂಕಿನ ಅತ್ಯುತ್ತಮ ರೈತ ಅಯ್ಕೆ ಕ್ಷೇತ್ರ ಭೇಟಿ | ತಿಪಟೂರು | 5 |
| 5 | 05/09/2023 | ತೊಗರಿ ತಾಕಿಗೆ ಕ್ಷೇತ್ರ ಭೇಟಿ | ಇಪ್ಪಾಡಿ | 6 |
| 6 | 08/09/2023 | ಭತ್ತ ಬೆಳೆ ತಾಕಿಗೆ ಕ್ಷೇತ್ರ ಭೇಟಿ | ಇಪ್ಪಾಡಿ | 7 |
| 7 | 11/09/2023 | ಶುಂಠಿ ಬೆಳೆ ತಾಕಿಗೆ ಕ್ಷೇತ್ರ ಭೇಟಿ | ಗೌಡನಕಟ್ಟೆ | 6 |
| 8 | 14/09/2023 | ಹೆಬ್ಬಾಳ ಅವರೆ ತಾಕಿಗೆ ಕ್ಷೇತ್ರ ಭೇಟಿ | ದೇವಿಹಳ್ಳಿ | 7 |
| 9 | 28/09/2023 | ಅಲಸಂದೆ ತಾಕಿಗೆ ಕ್ಷೇತ್ರ  ಭೇಟಿ | ಇಪ್ಪಾಡಿ | 11 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**